ಶಿವಮೊಗ್ಗ ಜಿಲ್ಲೆಯ ನಾಲೆಗಳಲ್ಲಿ ಹೂಳು ತುಂಬಿರುವುದು ಹಾಗೂ ಜಂಗಲ್ ಕಟಿಂಗ್ ಮಾಡದೇ ಇರುವುದರ ಬಗ್ಗೆ

11(36): ಶ್ರೀ ಕೆ. ಜಿ. ಕುಮಾರಸ್ವಾಮಿ (ಶಿವಮೊಗ್ಗ ಗ್ರಾಮಾಂತರ): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿನ ತುಂಗಾ ಎಡದಂಡೆ ಮತ್ತು ಬಲದಂಡೆ ನಾಲೆಗಳು/ಉಪ ನಾಲೆಗಳಲ್ಲಿ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ನಾಲೆ/ಉಪ ನಾಲೆಗಳಲ್ಲಿ ಜಂಗಲ್ ಮತ್ತು ಹೂಳು ತೆಗೆಯಿಸಲು ಸರ್ಕಾರದ ಕ್ರಮ ಕೈಗೊಳ್ಳಲಾಗುವುದೇ?

ಇ) 2007-08 ರಿಂದ 2010ರವರೆಗೆ ಈ ಕಾಮಗಾರಿಗೆ ಮಾಡಲಾದ ವೆಚ್ಚವೆಷ್ಟು? (ರೀಚ್‌ವಾರು ವಿವರ ನೀಡುವುದು);

ಈ) ಈ ನಾಲೆ/ ಉಪನಾಲೆಗಳಲ್ಲಿ ನೀರು ಹರಿಯುವುದನ್ನು ಕಾವಲು ಕಾಯಲು ಐ. ಸಿ. ಸಿ. ಕಮಿಟಿ ರಚಿಸಲಾಗುವುದೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):

ಅ) ಬಂದಿದೆ.

ಆ) ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತುಂಗಾ ಎಡದಂಡೆ ನಾಲೆ ಕಿ.ಮೀ 26.90 ರಿಂದ 56.80 ರವರೆಗೆ ಹಾಗೂ ಉಪ ನಾಲೆ ಸಂಖ್ಯೆ 21 ರಿಂದ ಉಪ ನಾಲೆ ಸಂಖ್ಯೆಯ 36 ರವರೆಗೆ ಹಾಗೂ ತುಂಗಾ ಬಲದಂಡೆ ನಾಲೆಯ ಕಿಮೀ 31.40 ರಿಂದ 52.00 ಕಿಮೀ ವರೆಗೆ ಹಾಗೂ ಉಪ ನಾಲೆ ಸಂಖ್ಯೆ 25 ರಿಂದ 38 ರ ವರೆಗೆ ಬರುತ್ತದೆ. ಪ್ರಸಕ್ತ ಸಾಲಿನಲ್ಲಿ ನಿಗಮದಿಂದ ಹಂಚಿಕೆ ಮಾಡಲಾದ 150 ಲಕ್ಷಗಳ ಅನುದಾನದ ಪೈಕಿ ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ತುಂಗಾ ನಾಲಗಳಲ್ಲಿ ಹೂಳು ಮತ್ತು ಜಂಗಲ್ ತೆಗೆಯಲು ರೂ. 51.00 ಲಕ್ಷಗಳ ಮೊತ್ತದ ಅವಶ್ಯಕವಿರುವ ಕಾಮಗಾರಿಗಳನ್ನು ಟೆಂಡರ್ ಮೂಲಕ ವಹಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

ಇ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ತುಂಗಾ ಎಡದಂಡೆ ಕಿ.ಮೀ 26.90 ರಿಂದ 56.80 ರ ವರೆಗೆ ಹಾಗೂ ಉಪ ನಾಲೆ ಸಂಖ್ಯೆ 36 ರವರೆಗೆ ಹಾಗೂ ತುಂಗಾ ಬಲದಂಡೆ ನಾಲೆ ಕಿ.ಮೀ.31.40ರಿಂದ 52.00 ಕಿಮೀ ವರೆಗೆ ಹಾಗೂ ಉಪ ನಾಲೆ ಸಂಖ್ಯೆ 25 ರಿಂದ 38 ರ ವರೆಗೆ ಅವಶ್ಯಕ ರೀಚ್‌ಗಳಲ್ಲಿ 2007-08 ರಿಂದ 2010 ರವರೆಗೆ ಕಾಮಗಾರಿಗೆ ಮಾಡಲಾದ ವೆಚ್ಚದ ವಿವರಗಳು ಇಂತಿವೆ.

ವರ್ಷ	ವೆಚ್ಚ (ರೂ. ಲಕ್ಷಗಳಲ್ಲಿ)
2007-09	–
2008-09	–
2009-10	25.37
2010-11	–

ಈ) ರಚಿಸಲಾಗುವುದು